ದ ಕೆಳಭಾಗ ಎಲ್ಲಿದೆ? 'ಷ್ವ' ಎನ್ನುವ ಒತ್ತರಕ್ಷರದ ಕೆಳಗಿನ 'ವ' ವನ್ನು, 'ವ' ಅಕ್ಷರದಿಂದ ಬೇರ್ಪಡಿಸುವುದು ಹೇಗೆ? ಅಜ್ಜನ ಕೋಲಿನ ರೂಪದ ದೀರ್ಘವನ್ನು ಉಲ್ಟಾ ಕಂಡಾಗ ಪಿನ್‌ಕೋಡಿನ ಒಂಬತ್ತು ಎಂದು ಗಲಿಬಿಲಿಯಾಗದಿರದೆ? ಇಂತಹ ಯಾವ ಸಮಸ್ಯೆಯನ್ನೂ ಎದುರಿಸದ ಮುಂಬಯಿಯವರು, ಸುಮ್ಮನೆ ಕಂಪ್ಯೂಟರಿಗೆ ನಮ್ಮ ಪಠ್ಯವನ್ನು ತುರುಕಿ, ಅದು ಕೊರೆದು ಹಾಕಿದ ಅಕ್ಷರದ ತುಣುಕುಗಳನ್ನು ಒಟ್ಟಾಗಿಸಿ ಕಳುಹಿಸಿಬಿಟ್ಟಿದ್ದರು. ಒಂದು ಭಾಷೆಗೂ ಮತ್ತೊಂದು ಭಾಷೆಗೂ ಇರುವ ಸೂಕ್ಷ್ಮತೆಯನ್ನು ಮನುಷ್ಯ ಗುರುತಿಸಬಲ್ಲನೆ ಹೊರತು, ಯಂತ್ರಗಳು ಹೇಗೆ ಗುರುತಿಸಿಯಾವು?

"ನೀವೇ ಏನಾದ್ರೂ ಸಹಾಯ ಮಾಡಿ ಸಾರ್... ನಂಗಂತೂ ಇದು ಬಗೆಹರಿಯಂಗಿಲ್ಲ" ಅಂತ ರಂಗಣ್ಣನವರು ಬೇಡಿಕೊಂಡರು. ನಾನು ಸುಮ್ಮನೆ ಆ ತುಂಡುಗಳ ಕಡೆಗೊಮ್ಮೆ ನೋಡಿದೆ. ರಿಸೆಪ್ಷನ್ ಪಡಸಾಲೆಯ ಝಗಮಗಿಸುವ ಬೆಳಕಿನಲ್ಲಿ ಆ ಲೋಹದ ತುಂಡುಗಳು ಫಳಫಳನೆ ಹೊಳೆಯುತ್ತಿದ್ದವು. ನನಗೆ ಹೊಟ್ಟೆಯಲ್ಲಿ ಒಂದು ರೀತಿಯಲ್ಲಿ ತೊಳೆಸಿದಂತೆ ಆಯ್ತು. ಅಕ್ಷರಗಳನ್ನು ಯಾವತ್ತೂ ಇಡಿಯಾಗಿ ನೋಡಿದವನು ನಾನು. ಅವನ್ನು ತುಂಡುತುಂಡಾಗಿ ಉಲ್ಟಾಪಲ್ಟಾ ನೋಡಿದಾಗ, ಜೀವವೊಂದು ಅಪಘಾತದಲ್ಲಿ ಮಡಿದು ಅವಯವಗಳು ಚೆಲ್ಲಾಪಿಲ್ಲಿಯಾದಂತೆ ಭಾಸವಾಗಿ ಹೆದರಿಕೆಯಾಗಿತ್ತು. ಆ ತುಂಡುಗಳನ್ನು ಕೈಯಲ್ಲಿ ಹಿಡಿದುಕೊಂಡಾಗ ನನ್ನ ಕೈ ನಡುಗಲಾರಂಭಿಸಿತು. ಕನ್ನಡದ ಮೇಲೆ ವಿಶಿಷ್ಟ ಕಾಳಜಿ ಮತ್ತು ಕನ್ನಡದ ಅಕ್ಷರಗಳಲ್ಲಿ ಜೀವಂತಿಕೆಯನ್ನು ಕಾಣುವ ನನಗೆ ಆ ದೃಶ್ಯ ಸಂಕಟವನ್ನುಂಟು ಮಾಡಿತು. ಆ ಕಾರಣಕ್ಕಾಗಿಯೋ ಏನೋ, "ಇದೆಲ್ಲಾ ನನ್ನ ಕೈಲೆ ಆಗಲ್ಲ ಕಣ್ರೀ... ಕಂಪೆನಿಯವರನ್ನೇ ಬರಲಿಕ್ಕೆ ಹೇಳ್ರಿ" ಅಂತ ಬಡಬಡಿಸಿದೆ.

"ನೀವೇ ಹಿಂಗಂದ್ರೆ ಹೆಂಗೆ ಸಾರ್? ಸೋಮವಾರ ಬೆಂಗಳೂರು ಬಂದ್ ಅದೆ. ಕನ್ನಡ ಹೋರಾಟದ ಸಂಘಟನೆಗಳು ಕರೆ ಕೊಟ್ಟಿವೆ. ಕನ್ನಡ ಬೋರ್ಡ್ ಇಲ್ಲ ಅಂದ್ರೆ ಗಲಾಟೆ ಮಾಡ್ತವೆ. ಈವತ್ತು ನಾಳೆಯೊಳಗೆ ನಾವೇ ಹೇಗಾದ್ರೂ ಮಾಡಿ ಮುಗಿಸಬೇಕು" ಎಂದು ರಂಗಣ್ಣ ಅಲವತ್ತುಕೊಂಡ.

ಆ ಹೊತ್ತಿನಲ್ಲಿ ನನ್ನ ಜೊತೆ ಇದ್ದ ವೆಂಕಯ್ಯ "ಸಾರ್, ನಾನು ಪ್ರಯತ್ನ ಪಡಲಾ?" ಎಂದು ಕೇಳಿದ. ಈ ತೆಲುಗು ಹುಡುಗ ನಮ್ಮ ಕನ್ನಡದ ಪಠ್ಯಕ್ಕೆ ಯಾವ ಸಹಾಯ ಮಾಡಿಯಾನು? ಎಂದು ಮೊದಲಿಗೆ ನನಗೆ ಅನುಮಾನವಾಯ್ತು. ಆದರೆ ಯಾರ ಪ್ರಯತ್ನವನ್ನೂ ತಡೆಯುವುದು ತಪ್ಪಾಗುತ್ತದೆ ಎಂದು ಬದುಕು ನನಗೆ ಕಲಿಸಿಕೊಟ್ಟಿತ್ತು. "ಟ್ರೈ ಮಾಡು... ಲೆಟ್ ಅಸ್ ಸಿ" ಎಂದೆ. ಅವನು ತನ್ನ ಫೈಲನ್ನು ಅಲ್ಲಿಯೇ ರಿಸೆಪ್ಷನ್ ಟೇಬಲ್ ಮೇಲೆ ಇಟ್ಟು, ಸ್ಪಷ್ಟವಾಗಿ ಚಕ್ಕಳಮಕ್ಕಳ ಹಾಕಿ ನೆಲದ ಮೇಲೆ ಕುಳಿತ. ರಂಗಣ್ಣನವರಿಂದ ಮೂಲ ಪಠ್ಯದ ಪ್ರಿಂಟ್‌ಔಟ್ ತೆಗೆದುಕೊಂಡು, ಒಂದೊಂದಾಗಿ ಅಕ್ಷರ ಜೋಡಿಸಲಾರಂಭಿಸಿದ. ನಾವಿಬ್ಬರು ಬಿಟ್ಟಗಣ್ಣಿಂದ ಅವನೆಡೆಗೆ ನೋಡುತ್ತಿದ್ದೇವೆ ಎಂಬ ಯಾವ ಆತಂಕವೂ ಇಲ್ಲದಂತೆ, ಅತ್ಯಂತ ಸಮಾಧಾನ ಸ್ಥಿತಿಯಲ್ಲಿ ಎಲ್ಲವನ್ನೂ ಹದಿನೈದು ನಿಮಿಷದಲ್ಲಿ ಜೋಡಿಸಿಬಿಟ್ಟ. ಆ ಹದಿನೈದು ನಿಮಿಷದಲ್ಲಿಯೇ ನಾನು ಅವನಿಗೆ ನಮ್ಮ ಕಂಪೆನಿಯಲ್ಲಿ ಉದ್ಯೋಗ ಕೊಡಲು ನಿರ್ಧರಿಸಿಬಿಟ್ಟಿದ್ದೆ.

ಕಗ್ಗಂಟನ್ನು ಬಿಡಿಸುವುದು ಅಂತಹ ಸುಲಭದ ಕೆಲಸವಲ್ಲ. ಅದಕ್ಕೆ ವಿಶೇಷವಾದ ಸಹನೆ, ಉತ್ಸಾಹ ಮತ್ತು ಜಾಣತನ ಬೇಕಾಗುತ್ತದೆ. ಆ ತರಹದ ಆಸಕ್ತಿಯಿದ್ದವರು ಒಳ್ಳೆಯ ಕಂಪ್ಯೂಟರ್ ಪ್ರೋಗ್ರಾಮರ್ ಆಗುತ್ತಾರೆ ಎಂದು ನಾನು ಅನುಭವದಿಂದ ಕಂಡುಕೊಂಡಿದ್ದೆ. ಆ